ನಂಜನಗೂಡು ಪಟ್ಟಣದ ಒಳಚರಂಡಿ ಯೋಜನೆಯ ಬಗ್ಗೆ :

೩೬೫. ಶ್ರೀ ಡಿ.ಟಿ. ಜಯಕುಮಾರ್ (ನಂಜನಗೂಡು).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನಂಜನಗೂಡಿನಲ್ಲಿ ಒಳಚರಂಡಿ ನಿರ್ಮಾಣ ಕಾರ್ಯ ಮಾಡಲು ಮಂಜೂರಾಗಿದೆಯೆ ಅಥವಾ ಅಲ್ಪ ವೆಚ್ಚದ ಶೌಚಾಲಯ ಯೋಜನೆ ಮಂಜೂರಾಗಿದೆಯೆ,

ಆ) ಮಂಜೂರಾಗಿದ್ದರೆ ಅದರ ಅಂದಾಜು ವೆಚ್ಚವೆಷ್ಟು ?

ಇ) ಹಾಗಿಲ್ಲದಿದ್ದಲ್ಲಿ ಯಾವಾಗ ಮಂಜೂರು ಮಾಡಲಾಗುವುದು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಅಲ್ಪ ವೆಚ್ಚದ ಶೌಚಾಲಯ ಯೋಜನೆ ಮಂಜೂರಾಗಿದೆ

ಆ) ೭,೨೬,೯೩೬,೦೦ ರೂ.ಗಳು

ಇ) ಉದ್ಭವಿಸುವುದಿಲ್ಲ.

ಹುಡ್ಕೋ ಜನತಾ ಮನೆಗಳ ಸಾಲ ಮನ್ನಾ ಮಾಡುವ ಬಗ್ಗೆ

೩೬೬. ಶ್ರೀ ಕೆ. ಕುಶಾಲ. (ಸೂಳ್ಯ).—ಮಾನ್ಯ ವಸತಿ ಇಲಾಖೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಕೆಲವು ವರ್ಷಗಳ ಹಿಂದಿನಿಂದ ವೀಡಿದ ಹುಡ್ಕೋ ಜನತಾ ಮನೆಗಳ ಫಲಾನುಭವಿಗಳ ಸಾಲದ ಕಂತನ್ನು ಈ ತನಕ ವಸೂಲಿ ಮಾಡದೆ ಈಗ ಸಾಲ ವಸೂಲಿ ಆರಂಭಿಸಿರುವುದು ಸರ್ಕಾರದವರ ಗಮನದಲ್ಲಿದೆಯೇ ?

ಆ) ಈ ತುರ್ತು ಕ್ರಮದಿಂದ ಬಡ ಫಲಾನುಭವಿಗಳ ಸಾಲಗಳನ್ನು ಏಕ ಗಂಟಿನಿಂದ ದೊಡ್ಡ ಮೊತ್ತದಲ್ಲಿ ಮರುಪಾವತಿ ಮಾಡಬೇಕಾಗಿ ಬಂದಿರುವುದು ಸರ್ಕಾರದ ಗಮನದಲ್ಲಿದೆಯೇ ?

ಇ) ಹಾಗಿದ್ದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಫಲಾನುಭವಿಗಳಿಗೆ ಸಾಲ ಮನ್ನಾ ಮಾಡಲು ಕ್ರಮ ಕೈ ಗೊಳ್ಳುವರೇ ?

ಶ್ರೀ ಮೊಹಮ್ಮದ್ ಮೊಯಿನುದ್ದೀನ್, (ವಸತಿ ಇಲಾಖೆ ರಾಜ್ಯ ಸಚಿವರು). —

ಅ) ಈ ಯೋಜನೆಯಡಿಯಲ್ಲಿ ಸಾಲವನ್ನು ಫಲಾನುಭವಿಗಳಿಂದ ಇಪ್ಪತ್ತು ವರ್ಷಗಳಲ್ಲಿ ವಸೂಲಿ ಮಾಡಬೇಕಾಗಿರುತ್ತದೆ. ಆದರೆ ಈವರೆಗಿನ ಸಾಲ ವಸೂಲಿಯು ತೃಪ್ತಿಕರವಾಗಿರಲಿಲ್ಲವಾದ್ದರಿಂದ ಸದರಿ ಸಾಲ ವಸೂಲಿಯನ್ನು ಹೆಚ್ಚಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸರ್ಕಾರವು ನಿರ್ದೇಶನವನ್ನು ನೀಡಿರುತ್ತದೆ.

ಆ) – ಇಲ್ಲ –

ಇ) – ಉದ್ಭವಿಸುವುದಿಲ್ಲ –

ಮಂಡಲ ಪಂಚಾಯತಿ ಕಾರ್ಯದರ್ಶಿಗಳ ಹುದ್ದೆ

೩೬೭. ಶ್ರೀ ಗೋಪಾಲ ಮಂಕಿಂದ ಕಾನಡೆ (ಸಿರ್ಸಿ).—ಮಾನ್ಯ ಗ್ರಾಮೀಣ ಅಭಿವೃದ್ಧಿ, ಪಂಚಾಯತ್ ರಾಜ್ ಮತ್ತು ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಮಂಡಲ ಪಂಚಾಯತಿಗಳೆಷ್ಟು ?

ಆ) ಮಂಡಲ ಪಂಚಾಯತಿ ಕಾರ್ಯದರ್ಶಿಗಳ ಒಟ್ಟು ಹುದ್ದೆಗಳೆಷ್ಟು ?

ಇ) ಭರ್ತಿ ಮಾಡದೆ ಇರುವ ಕಾರ್ಯದರ್ಶಿಗಳ ಹುದ್ದೆಗಳ ಸಂಖ್ಯೆ ಎಷ್ಟು ?